ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ವಿವಾದ: 192/192:2015-16 ದಿ: 20-05-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ನಾಗಮ್ಮ ಗಂಡ: ಹೊಸಳೆಪ್ಪ
ಸಂತೆ ಕೂಡ್ಲೂರು ಗ್ರಾಮ,ಆದೋನಿ ತಾ:
2) ನರಸಮ್ಮ ಗಂಡ: ಯಂಕಪ್ಪ
ಬೂದುಗುಪ್ಪ ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಶಂಕ್ರಪ್ಪ ತಂದೆ: ಲೇಟ್ ಯಂಕಪ್ಪ
ಗಾಂಧಿಗ್ರಾಮ ಮೈಲಾಪುರ
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ಮ್ಯುಟೇಷನ್ ಸಂಖ್ಯೆ |
|---|---|---|---|---|
| ಬೂದುಗುಪ್ಪ ಗ್ರಾಮ | 39/B3 | 1-00 | H-64/2013-14 | 262/2013-14 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಬೂದುಗುಪ್ಪ ಗ್ರಾಮದ** ಸ.ನಂ. **39/B3** ವಿಸ್ತೀರ್ಣ **1-00 ಎಕರೆ** ಜಮೀನಿಗೆ ಸಂಭಂದಿಸಿದಂತೆ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: **6283/12-13** ದಿ: **10-1-2013** ರಂದು **ನಾಗಮ್ಮ ಗಂಡ: ಎಂ. ಹೊಸಳೆಪ್ಪ ಉಪ್ಪಾರ ಹೊಸಳ್ಳಿ ಗ್ರಾಮ ಇವರ ಹೆಸರಿನಲ್ಲಿ ದಾನಪತ್ರ ನೊಂದಣಿ ಹೊಂದಿದ್ದು** ಖಾತೆ ಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಲೇಟ್ ಶಂಕ್ರಪ್ಪ ತಂದೆ: ಲೇಟ್ ಯಂಕಪ್ಪ ಗಾಂಧಿಗ್ರಾಮ ಮೈಲಾಪುರ** ಇವರು ದಿ: **12-6-2014** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನುದಿ: **21-8-2015, 18-9-2015, 16-11-2015, 16-01-2016,8-2-2016, 11-3-2016, 26-3-2016 , 1-4-2016, 7-5-2016** ಮತ್ತು **20-5-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ ನಾಗಮ್ಮ ಗಂಡ: ಹೊಸಳೆಪ್ಪ ಉಪ್ಪಾರ ಹೊಸಳ್ಳಿ ಗ್ರಾಮ ಇವರು ಬೂದುಗುಪ್ಪ ಗ್ರಾಮದ ಸ.ನಂ. **39/B3** ವಿಸ್ತೀರ್ಣ **1-00 ಎಕರೆ** ಜಮೀನು ನರಸಮ್ಮ ಗಂಡ: ಯಂಕಪ್ಪ ಇವರಿಂದ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: 6283/12-13 ದಿ: 10-1-2013 ರಂದು ದಾನಪತ್ರ ಪ್ರಕಾರ ನೋಂದಣಿ ಮಾಡಿಕೊಂಡಿರುತ್ತದೆ.. ಶಂಕ್ರಪ್ಪ ತಂದೆ: ಲೇಟ್ ಯಂಕಪ್ಪ ಇವರು ದಿ: 12-6-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ.ದಿನಾಂಕ: 14-7-2014 ರಂದು ಮೃತಪಟ್ಟಿದ್ದು ಅವರ ಪತ್ನಿಯಾದ ಸಾವಿತ್ರಮ್ಮ ಇವರು ವಿಚಾರಣೆ ದಿನಾಂಕ: 18-9-2015, 16-1-2016, 26-3-2016, ರಂದು ಹಾಜರಾಗಿರುತ್ತಾರೆ. ಸದ್ರಿ ಆಸ್ತಿ ಸಾವಿತ್ರಮ್ಮ ಗಂಡ: ಶಂಕ್ರಪ್ಪ ಇವರಿಗೂ ತಮಗೂ ಪಾಲುಬರುತ್ತದೆಂದು ನಿರಾಧಾರವಾದ ಆಕ್ಷೇಪಣೆ ಅರ್ಜಿ ಸಲ್ಲಿಸಿದ್ದು ತವರು ಮನೆಯಿಂದ ಬಂದ ಆಸ್ತಿ ನನಗೆ ದಾನ ಪತ್ರ ಮಾಡಿರುತ್ತಾರೆ. ಆದುದರಿಂದ ನನ್ನ ಹೆಸರಿಗೆ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಶಂಕ್ರಪ್ಪ ತಂದೆ: ಲೇಟ್ ಯಂಕಪ್ಪ ಇವರು ದಿ:12-6-2014 ರಂದು ಸದ್ರಿ ಜಮೀನಿಗೆ ತಕರಾರು ಹಾಕಿದ್ದು 14-7-2014 ರಂದು ಮೃತಪಟ್ಟಿರುತ್ತಾರೆ. ಅವರ ಪತ್ನಿಯಾದ ಸಾವಿತ್ರಮ್ಮ ಇವರು ವಿಚಾರಣೆ ದಿ:18-9-2015, 16-1-2016, 26-2-2016 ರಂದು ಹಾಜರು ಆಗಿರುತ್ತಾರೆ ಯಾವುದೇ ಲಿಖಿತ ಹೇಳಿಕೆಗಳನ್ನು ನೀಡಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು **ದಾನ ಪತ್ರ ಪ್ರಕಾರ** ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

**ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಬಲಕುಂದಿಗ್ರಾಮದ ಸ.ನಂ.39/B3 ವಿಸ್ತೀರ್ಣ 1-00 ಎಕರೆ ಜಮೀನು ನೋಂದಣಿ ದಾನ ಪತ್ರ ಪ್ರಕಾರ ನಾಗಮ್ಮ ಗಂಡ: ಹೊಸಳೆಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.**

**ಈ ಆದೇಶವನ್ನು ದಿನಾಂಕ: ೨೦ -05-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.**

ಉಪ ತಹಶೀಲ್ದಾರರು,
ಉಪ ತಹಶೀಲ್ದಾರರು,
ಕರೂರು,
ನಾಡ ಕಾರ್ಯಾಲಯ,
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ